

بِسْمِ اللَّهِ الرَّحْمَنِ الرَّحِيمِ

# ಸತ್ಯತೆಗಿರುವ ಪುರಾವೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **24-11-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉದ್ಧರಣಿ ನೀಡಿದ್ದೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದರು: ಒಬ್ಬನು ದ್ವೇಷ ಮತ್ತು ಹಠದಿಂದ ಮುಕ್ತನಾಗಿ ಸತ್ಯವನ್ನು ಪ್ರಕಟಿಸಬೇಕೆಂದು ನಮಾಝ್‌ಗಳಲ್ಲಿ ಸಹ ಅಲ್ಲಾಹನನ್ನು ಬೇಡಿಕೊಳ್ಳುತ್ತಾ ಇದ್ದರೆ ನಲ್ವತ್ತು ದಿವಸಗಳು ಮುಗಿತಾಯವಾಗುವ ಮೊದಲೇ ಅವನಿಗೆ ಅಲ್ಲಾಹನು ಸತ್ಯವನ್ನು ತಿಳಿಸುವನು. ಆದರೆ ಸ್ವಚ್ಛವಾದ ಹೃದಯವನ್ನು ಹೊಂದುವುದು, ಪ್ರತಿಯೊಂದು ರೀತಿಯ ದ್ವೇಷದಿಂದ ಮುಕ್ತನಾಗಿ ಪರಿಶುದ್ಧವಾಗುವುದು ಅತ್ಯಂತ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಯಾರು ಹೃದಯಗಳಲ್ಲಿ ಅಸೂಯೆ ಹೊಂದಿರುವರೋ, ದ್ವೇಷ ಹೊಂದಿರುವರೋ, ಒಳ್ಳೆಯ ಮತ್ತು ಪರಿಶುದ್ಧವಾದ ಯೋಚನೆಗಳನ್ನು ಹೊಂದಿಲ್ಲವೋ ಅಂತಹ ಜನರು ಹೇಳುವರು, ಅಲ್ಲಾಹನು ನಮಗೆ ಸ್ವಪ್ನಗಳ ಮೂಲಕ ಮಾರ್ಗದರ್ಶನ ನೀಡಲಿಲ್ಲ, ಅಥವಾ ಅಲ್ಲಾಹನು ನಿಮ್ಮ ವಿರುದ್ಧವಾಗಿ ತಿಳಿಸಿರುವನು ಎಂದು ಹೇಳುವರು.

ಒಟ್ಟಾರೆ ಹೇಳುವುದಾದರೆ, ಯಾರು ಪರಿಶುದ್ಧವಾದ ಹೃದಯದೊಂದಿಗೆ ಪ್ರಾರ್ಥಿಸುತ್ತಾರೋ ಅಂತಹ ಜನರಿಗೆ ಅಲ್ಲಾಹನಿಂದ ಮಾರ್ಗದರ್ಶನ ಲಭಿಸುತ್ತವೆ. ಅನೇಕ ಜನರಿಗೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ, ಅವರು ಜೀವಿಸಿರುವಾಗಲೇ ಸ್ವಪ್ನಗಳ ಮೂಲಕ ಮಾರ್ಗದರ್ಶನ ನೀಡಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಶಿಷ್ಯರೊಂದಿಗೆ ಒಮ್ಮೆ ಕುಳಿತಿದ್ದಾಗ ಲಾಹೋರಿನಿಂದ ಬಂದ ಒಂದು ಪತ್ರದ ಬಗ್ಗೆ ಪ್ರಸ್ತಾಪಿಸಲಾಯಿತು. ಆ ಪತ್ರ ಬರೆದವರು ತನಗೆ ಸ್ವಪ್ನ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯವಂತರೆಂದು ತಿಳಿಸಲಾಯಿತೆಂದು ಬರೆದಿದ್ದರು. ಆ ಪತ್ರ ಬರೆದವರು ದಾತಾಗಂಜ್‌ಬಖ್‌ಶ್ ರವರ ದರ್ಗದ ಸಮೀಪ ವಾಸಿಸುವ ಒಬ್ಬ ಫಖೀರರೊಂದಿಗೆ ಸಂಬಂಧ ಹೊಂದಿದ್ದರು. ಪತ್ರದ ಲೇಖಕ ಆ ಫಖೀರರೊಂದಿಗೆ ತನ್ನ ಸ್ವಪ್ನದ ವಿಷಯ ಹೇಳಿದಾಗ ಆ ಫಖೀರ ಹೇಳಿದರು: ಮಿರ್ಝಾ ಸಾಹಿಬರು ಇಷ್ಟು ಸಮಯದೊಳಗೆ ಅಭಿವೃದ್ಧಿ ಗಳಿಸಿದುದು ಅವರ ಸತ್ಯಕ್ಕೆ ಸಾಕ್ಷ್ಯವಾಗಿದೆ. ಆಗ ಅಲ್ಲಿ ಕುಳಿತ್ತಿದ್ದ ಇನ್ನೊಬ್ಬ ಫಖೀರ ಹೇಳಿದರು: ನಾವು ಸಹ ಅಲ್ಲಾಹನೊಂದಿಗೆ ಕೇಳುವೆವು. ಮೂರನೆಯ ದಿನ ಈ ಎರಡನೆಯ ಫಖೀರ್ ಹೇಳಿದರು: ಅಲ್ಲಾಹನು ಹೇಳಿದ್ದಾನೆ ಮಿರ್ಝಾ ಮೌಲಾ ಎಂದು. ಆಗ ಮೊದಲನೆಯ ಫಖೀರ್ ಹೇಳಿದರು, ಮೌಲಾ ಎಂದಲ್ಲ ಮೌಲಾನಾ ಎಂದು ಹೇಳಿರಬಹುದು ಏಕೆಂದರೆ ಅವರು ನಿನ್ನ ನನ್ನ ಮತ್ತು ನಮ್ಮೆಲ್ಲರ ಮೌಲಾ ಆಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ವಿಷಯಗಳ ಬಗ್ಗೆ ಆಲಿಸಿದ ನಂತರ ಹೇಳಿದರು: ಈಗ ಅನೇಕರಿಗೆ ಸ್ವಪ್ನ ಕಾಣಿಸುತ್ತಾ ಇದೆ. ಅಲ್ಲಾಹನು ಜನರಿಗೆ ಸ್ವಪ್ನಗಳ ಮೂಲಕ ಅರಿವು ನೀಡಲು ಇಚ್ಛಿಸುತ್ತಾನೆಂದು ತೋರುತ್ತದೆ. ಅಲ್ಲಾಹನ ದೂತರು ಎಲ್ಲಾ ಕಡೆಗಳಲ್ಲೂ ತಿರುಗುತ್ತಿದ್ದಾರೆ, ನೀವು ನಂಬಿರಿ, ನಂಬಿರಿ ಎಂದು ಜನರೊಂದಿಗೆ ಹೇಳುತ್ತಾ ತಿರುಗುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ವಿರುದ್ಧ ಗ್ರಂಥ ರಚಿಸಲು ಉದ್ದೇಶಿಸಿದ ಒಬ್ಬನ ಬಗ್ಗೆ ಪ್ರಸ್ತಾಪಿಸಿದರು. ಆತನಿಗೆ ಸ್ವಪ್ನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು, ನೀನು ಯಾರ ವಿರುದ್ಧ ಬರೆಯಲು ಉದ್ದೇಶಿಸಿರುವೆಯೋ ಆ ಮಿರ್ಝಾ ಸಾಹಿಬ್ ಸತ್ಯವಂತರಾಗಿದ್ದಾರೆ. ಹೀಗೆ ಅಲ್ಲಾಹನು ಸಾತ್ವಿಕ ಪ್ರಕೃತಿಯನ್ನು ಹೊಂದಿದ ಜನರು ತಪ್ಪು ಕೆಲಸ ಮಾಡದಂತೆ ಸಹ ರಕ್ಷಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಪ್ರಾರಂಭವಾದ ಅಲ್ಲಾಹನ ಈ ನಡೆವಳಿಕೆ ಈಗಲೂ ಜಾರಿಯಲ್ಲಿದೆ. ಸಾತ್ವಿಕ ಪ್ರಕೃತಿ ಹೊಂದಿದ ಜನರಿಗೆ ಅಲ್ಲಾಹನು ಮಾರ್ಗದರ್ಶನ ನೀಡುತ್ತಾನೆ.

ಪಶ್ಚಿಮ ಆಫ್ರಿಕದ ಮಾಲಿ ದೇಶದ ಮುಬಲ್ಲಿಗ್ ಬರೆಯುತ್ತಾರೆ: ಮುಸ್ತಫಾ ದಯಾಲೂ ಸಾಹಿಬ್ ಒಂದು ಸ್ವಪ್ನ ಕಂಡರು. ಅವರು ಸ್ವರ್ಗದಲ್ಲಿ ಒಂದು ಸುಂದರ ಮನೆಯಲ್ಲಿದ್ದಾರೆ. ಮನೆಯ ಹೊರಗೆ ಒಂದು ಭಾಗದಲ್ಲಿ ನೀರು ಹರಿಯುತ್ತಿತ್ತು. ಅದರಲ್ಲಿ ಒಬ್ಬ ಬಿಳಿ ವರ್ಣದ ಹಿರಿಯರ ಚಿತ್ರವಿತ್ತು. ಅವರು ಪಗಡಿ ಧರಿಸಿದ್ದರು. ಈ ಸ್ವಪ್ನ ಕಂಡ ಸ್ವಲ್ಪ ಸಮಯದ ನಂತರ ಅವರು ಒಬ್ಬ ಸ್ನೇಹಿತರ ಮನೆಗೆ ಹೋದರು. ಅಲ್ಲಿ ತಾನು ಸ್ವಪ್ನದಲ್ಲಿ ಕಂಡ ಹಿರಿಯರ ಚಿತ್ರವನ್ನು ಕಂಡರು. ಅದು ಯಾರ ಚಿತ್ರ ಎಂದು ಸ್ನೇಹಿತನೊಂದಿಗೆ ಕೇಳಿದಾಗ ಅವರು ಹೇಳಿದರು: ಇದು ಇಮಾಮ್ ಮಹ್‌ದಿಯವರ ಚಿತ್ರ ಎಂದು. ಆಗ ಅವರು ತನ್ನ ಸ್ವಪ್ನದ ಕುರಿತು ಹೇಳಿ ಅಹ್ಮದಿಯ್ಯತ್ ಬಗ್ಗೆ ಹೆಚ್ಚು ಮಾಹಿತಿ ಕೇಳಿದರು. ಆಗ ಅಹ್ಮದಿ ಸ್ನೇಹಿತ ಹೇಳಿದರು: ಇಂದು ನಮ್ಮ ಮಾಸಿಕ ಸಭೆ ಜರಗಲಿಕ್ಕಿದೆ. ನೀವು ನನ್ನೊಂದಿಗೆ ಬನ್ನಿರಿ. ನೀವು ಮುಬಲ್ಲಿಗರೊಂದಿಗೆ ಏನು ಬೇಕಾದರೂ ಪ್ರಶ್ನೆಗಳನ್ನು ಕೇಳಬಹುದು. ಹಾಗೆ ಅವರು ಮಾಸಿಕ ಸಭೆಯಲ್ಲಿ

ಭಾಗವಹಿಸಿದರು. ಸಭೆಯ ನಂತರ ಅವರು ತಾನು ಅಹ್ಮದಿಯಾಗಿರುವೆನು ಎಂದು ಪ್ರಕಟಿಸಿದರು.

ಯಮನಿನ ಜಮೀಲ ಸಾಹಿಬ ಹೇಳುತ್ತಾರೆ: ಅಹ್ಮದಿಯಾ ಜಮಾಅತ್ ಬಗ್ಗೆ ಮಾಹಿತಿ ಗಳಿಸುವುದಕ್ಕಿಂತ ಬಹಳ ಹಿಂದೆ ನಾನು ಸೌದಿ ಅರೇಬಿಯಾದಲ್ಲಿದ್ದೆ. ಅಲ್ಲಿ ನಾನು ಸೂಫಿಸಂ ಬಗ್ಗೆ ಒಲವು ಹೊಂದಿದ್ದೆನು. ಹಝ್ರತ್ ಅಬ್ದುಲ್ ಖಾದಿರ್ ಜೀಲಾನಿಯವರ ಗ್ರಂಥಗಳು ನನಗೆ ಬಹಳ ಇಷ್ಟಕರವಾದುವು. ಅವರು ವಿವರಿಸಿದ ಏಕಾಂಗಿ ಧ್ಯಾನ ನನಗೆ ಸಮಾಧಾನ ನೀಡುತ್ತಿತ್ತು ಮತ್ತು ಆಧ್ಯಾತ್ಮಿಕತೆಯ ಭಾವನೆ ಉಂಟುಮಾಡುತ್ತಿತ್ತು. ಇಂತಹ ಏಕಾಂಗಿ ಧ್ಯಾನ ಮಾಡುತ್ತಿದ್ದಾಗ ಒಂದು ರಾತ್ರಿ ನಾನು ಒಂದು ಸ್ವಪ್ನ ಕಂಡೆನು. ಚಂದ್ರನ ಹಾಗಿರುವ ಬಹಳ ದೊಡ್ಡ ಒಂದು ನಕ್ಷತ್ರ ಭೂಮಿಗೆ ಇಳಿದು ಬಂದಿದೆ ಮತ್ತು ಭೂಮಿಯಲ್ಲಿ ಚಲಿಸುತ್ತಾ ಇದೆ. ಅದು ಛಾವಣಿಯ ಮೂಲಕ ನಮ್ಮ ಮನೆಯನ್ನು ಪ್ರವೇಶಿಸಿತು. ನಾನು ಭಯಭೀತಳಾದೆ. ಆಗ ನಾನು ಎಚ್ಚರಗೊಂಡೆ. ಕೆಲವು ದಿನಗಳ ನಂತರ ನಾನು ಇನ್ನೊಂದು ಸ್ವಪ್ನ ಕಂಡೆನು. ಐದು ನಕ್ಷತ್ರಗಳು ಸಾಲಾಗಿ ನಿಂತು ಭೂಮಿಯಲ್ಲಿ ಚಲಿಸುತ್ತಿದ್ದುವು. ಈ ನಕ್ಷತ್ರಗಳು ನಾನು ಹಿಂದೆ ಕಂಡ ನಕ್ಷತ್ರಕ್ಕಿಂತ ಗಾತ್ರದಲ್ಲಿ ಚಿಕ್ಕದಾಗಿದ್ದುವು. ಅನಂತರ ಎಂ.ಟಿ.ಎ. ಮುಖಾಂತರ ಅಹ್ಮದಿಯಾ ಜಮಾಅತ್ ಬಗ್ಗೆ ತಿಳಿದಾಗ ಅದರ ಬಗ್ಗೆ ಹೆಚ್ಚಿನ ಮಾಹಿತಿ ಗಳಿಸುವ ಅಭಿರುಚಿ ವರ್ಧಿಸುತ್ತಾ ಹೋಯಿತು. ಎಂ.ಟಿ.ಎ. ನೋಡುತ್ತಿದ್ದಾಗ ನನ್ನ ಹೃದಯದಲ್ಲಿ ಹಝ್ರತ್ ಇಮಾಮ್ ಮಹ್‌ದಿ ಅಲೈಹಿಸ್ಸಲಾಮರ ಬಗ್ಗೆ ಪ್ರೀತಿ ಹುಟ್ಟಿತು ಮತ್ತು ಅದು ವರ್ಧಿಸುತ್ತಾ ಹೋಯಿತು. ಅವರೇ **ಇಮಾಮುಝ್ಝಮಾನ್** ಎಂದು ನನಗೆ ಪರಿಪೂರ್ಣ ದೃಢ ನಂಬಿಕೆ ಉಂಟಾಯಿತು. ಇದೇ ಕಾಲದಲ್ಲಿ **ಅಲ್‌ಹವಾರುಲ್ ಮುಬಾಶಿರ್** ಕಾರ್ಯಕ್ರಮದಲ್ಲಿ ಹಝ್ರತ್ ಇಮಾಮ್ ಮಹದಿ ಅಲೈಹಿಸ್ಸಲಾಮರ ಸತ್ಯತೆ ಬಗ್ಗೆ ಸಂಶೋಧನೆ ನಡೆಸುವವರು ಇಸ್ತಿಖಾರ ಪ್ರಾರ್ಥನೆ ಮಾಡಿ ಅಲ್ಲಾಹನಿಂದ ಮಾರ್ಗದರ್ಶನವನ್ನು ಬೇಡಿಕೊಳ್ಳುವ ಪ್ರಾರ್ಥನೆ ಮಾಡಬೇಕು ಎಂದು ವಿವರಿಸಲಾದುದನ್ನು ನಾನು ಆಲಿಸಿದೆ. ಅಂತೆಯೇ ನಾನು ಎರಡು ರಕ್‌ಅತ್ ನಮಾಝ್ ಮಾಡಿ ನಿದ್ರಿಸಿದೆ. ಅದೇ ರಾತ್ರಿ ನಾನು ಸ್ವಪ್ನದಲ್ಲಿ ಕಂಡೆನು. ನಾನು ಮಕ್ಕದಲ್ಲಿ ಬಹಳ ಜನರು ಜಮಾಯಿಸಿದ್ದ ಗುಂಪಿನಲ್ಲಿದ್ದೇನೆ. ಜನರು ಹಿಮ್ಮಡಿ ಎತ್ತಿ ಪಾದಗಳ ಬೆರಳುಗಳ ಮೇಲೆ ನಿಂತು ಕತ್ತನ್ನು ಎತ್ತಿಹಿಡಿದು ಒಬ್ಬ ವ್ಯಕ್ತಿಯನ್ನು ನೋಡಲು ಪ್ರಯತ್ನಿಸುತ್ತಿದ್ದಾರೆ. ಆಗ ಒಬ್ಬರು ಉಚ್ಚ ಧ್ವನಿಯಲ್ಲಿ ಕೂಗಿ ಹೇಳಿದರು, ಓ ಜನರೇ, ನಿಮ್ಮ ಇಮಾಮ್ ಆಗಮಿಸಿರುವರು. ಇಮಾಮ್ ಮಹ್‌ದಿ ಆಗಮಿಸಿರುವರು. ನಾನು ಸಹ ಆ ದಿಕ್ಕಿನ ಕಡೆಗೆ ನೋಡುತ್ತಿದ್ದೇನೆ. ಹಝ್ರತ್ ಇಮಾಮ್ ಮಹ್‌ದಿ ಅಲೈಹಿಸ್ಸಲಾಮ್ ಒಂದು ಎತ್ತರವಾದ ಸ್ಥಳದಲ್ಲಿ ಎಲ್ಲರ ಎದುರಿಗೆ ಪ್ರತ್ಯಕ್ಷರಾಗುತ್ತಾರೆ. ಅವರ ಮುಖ ಬೆಳದಿಂಗಳ ಚಂದ್ರನಂತೆ ಹೊಳೆಯುತ್ತಿದೆ. ಕಣ್ಣುಗಳಲ್ಲಿ ದುಃಖದ ಚಿಹ್ನೆ ಇತ್ತು. ನಾನು ಅವರ ಮುಖವನ್ನು ಲಕ್ಷ್ಯವಿಟ್ಟು ನೋಡಿದಾಗ ಅದು ಎಂ.ಟಿ.ಎ.ದಲ್ಲಿ ಕಾಣುತ್ತಿದ್ದ ಅದೇ ಇಮಾಮ್ ಮಹ್‌ದಿ ಮತ್ತು ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಖವಾಗಿತ್ತು. ಅದನ್ನು ಕಂಡ ಕೂಡಲೆ ನನ್ನ ಕಣ್ಣಿನಲ್ಲಿ ನೀರು ಹರಿಯಿತು. ನಾನು ಜೋರಾಗಿ ಅಳಲು ಪ್ರಾರಂಭಿಸಿದೆ. ನಾನು ಈ ಸ್ವಪ್ನ ಕಾಣುತ್ತಿದ್ದಾಗ ನನ್ನ ಪತಿ ಎಚ್ಚರದಿಂದಿದ್ದರು. ಅವರು ನನ್ನನ್ನು ಎಬ್ಬಿಸಿ ಹೇಳಿದರು: ನೀನು ಬಹಳ ನೋವಿನಿಂದ ಅಳುತ್ತಿದ್ದೆ ಎಂದು. ನಾನು ಎಚ್ಚರಗೊಂಡಾಗ ನನ್ನ ಕಣ್ಣುಗಳು ಅಶ್ರುಭರಿತವಾಗಿದ್ದುವು. ಈ ಸ್ವಪ್ನ ಕಂಡ ನಂತರ **ಇಮಾಮುಝ್ಝಮಾನ್** ಇವರೇ ಎಂದು ನನಗೆ ದೃಢವಾಯಿತು. ಹಾಗೆ ನಾನು ಇಮಾಮರ ಬೈಅತ್ ಮಾಡಲು ನಿರ್ಧರಿಸಿದೆ.

ಈ ಮಹಿಳೆ ಯಮನಿನವರಾಗಿದ್ದಾರೆ. ಯಮನ್ ದೇಶದ ಸ್ಥಿತಿ ಈಗ ಬಹಳ ಹಾಳಾಗಿದೆ ಎಂದು ಎಲ್ಲರಿಗೂ ತಿಳಿದಿದೆ. ಆ ದೇಶಕ್ಕೆ ಹೋಗಲಿರುವ ಸಮುದ್ರ ಮಾರ್ಗಗಳನ್ನೂ ವಾಯುಮಾರ್ಗವನ್ನೂ ಸೌದಿ ಅರೇಬಿಯಾ ತಡೆಗಟ್ಟಿದೆ. ಅಲ್ಲಿಗೆ ನೆರವು ತಲಪಿಸುವುದನ್ನು ತಡೆಯಲಾಗಿದೆ. ನಿಷ್ಕಳಂಕ ಮಕ್ಕಳು, ಮಹಿಳೆಯರು, ವೃದ್ಧರು ಆಹಾರ ದೊರೆಯದ ಕಾರಣ ಮತ್ತು ವೈದ್ಯಕೀಯ ಚಿಕಿತ್ಸೆ ಲಭಿಸದ ಕಾರಣ ಸಾಯುತ್ತಿದ್ದಾರೆ. ಮುಸ್ಲಿಮರು ಮುಸ್ಲಿಮರನ್ನು ಹತ್ಯೆ ಮಾಡುತ್ತಿದ್ದಾರೆ. ಅವರು ಆಗಮಿಸಿದ ಇಮಾಮರನ್ನು ನಂಬದ ಕಾರಣ ಹೀಗೆ ಸಂಭವಿಸುತ್ತಿದೆ. ಅವರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರ ಸ್ಥಿತಿಯನ್ನು ಬದಲಾಯಿಸಲಿ. ಅವರು ಸ್ವಾತಂತ್ರ್ಯ ಮತ್ತು ಸೌಲಭ್ಯದಿಂದ ಉಸಿರಾಡುವಂತಾಗಲಿ. ಅಲ್ಲಾಹನು ಅವರ ಮೇಲೆ ದಯೆದೋರಲಿ.

ಒಳ್ಳೆಯ ಪ್ರಕೃತಿ ಹೊಂದಿದ ಕೆಲವರು ಹೃದಯದಲ್ಲಿ ಅಹ್ಮದಿಯ್ಯತ್ತನ್ನು ಸತ್ಯವೆಂದು ನಂಬುತ್ತಿದ್ದರೂ ಕೆಲವು ಕಾರಣಗಳಿಂದ ಬೈಅತ್ ಮಾಡಿರುವುದಿಲ್ಲ. ಅವರು ಬೈಅತ್ ಮಾಡಿ ಜಮಾತ್‌ಗೆ ಸೇರಬೇಕೆಂದು ಅಲ್ಲಾಹನು ಹೇಗೆ ಅವರ ಗಮನ ಹರಿಸುತ್ತಾನೆ ಎಂಬುದಕ್ಕೆ ಸಂಬಂಧಿಸಿ ಒಂದು ಘಟನೆಯನ್ನು ಮಾಲಿ ದೇಶದ ಕಾಯಿ ರೀಜನಿನ ಮುಅಲ್ಲಿಮ್ ಹೀಗೆ ಬರೆಯುತ್ತಾರೆ: ಅಬ್ದುಲ್ ಹಯ್ ಜಾಬಿ ಎಂಬವರ ಒಬ್ಬ ಸ್ನೇಹಿತ ರಮಝಾನ್ ತಿಂಗಳಲ್ಲಿ ಅಚಾನಕವಾಗಿ ಮೃತರಾದರು. ಜಾಬಿ ಸಾಹಿಬರು ಸ್ವಪ್ನದಲ್ಲಿ ಕಂಡರು: ತಾನು ಮೃತರಾದ ಆ ಸ್ನೇಹಿತರ ಜೊತೆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದೇನೆ. ಸ್ನೇಹಿತ ಜಾಬಿ ಸಾಹಿಬರೊಂದಿಗೆ ಹೇಳುತ್ತಾರೆ: ನೀವು ಯಾವ ಜಮಾಅತಿಗೆ ಸೇರುತ್ತಿರುವಿರೋ ಅದು ಸತ್ಯ ಜಮಾಅತ್ ಆಗಿದೆ. ನಾನು ಸಹ ಅದೇ ಜಮಾಅತಿಗೆ ಸೇರುತ್ತೇನೆ ಎಂದು ಹೇಳಿದರು. ಅಬ್ದುಲ್ ಹಯ್ ಜಾಬಿಯವರು ನಮ್ಮ ರೇಡಿಯೋ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ಆಲಿಸುತ್ತಿದ್ದರು. ಮತ್ತು ಹೃದಯದಲ್ಲಿ ಅಹ್ಮದಿ ವಿಶ್ವಾಸಿಯಾಗಿದ್ದರು. ಆದರೆ ಬೈಅತ್ ಮಾಡಿರಲಿಲ್ಲ. ಸ್ವಪ್ನ ಕಂಡ ನಂತರ ಫೋನ್‌ನಲ್ಲಿ ಹೇಳಿದರು,

ನಾನು ಕಾಯಿ ನಗರದಿಂದ ದೂರವಾಗಿ ವಾಸಿಸುತ್ತಿದ್ದರೂ ನಿಮ್ಮ ರೇಡಿಯೋ ಮೂಲಕ ತಬ್ಲೀಗ್ ಕಾರ್ಯಕ್ರಮ ಆಲಿಸುತ್ತಿದ್ದೇನೆ. ನಾನು ಈ ರೀತಿ ಸ್ವಪ್ನ ಕಂಡಿದ್ದೇನೆ. ನನ್ನ ಬೈಅತ್ ಅಂಗೀಕರಿಸಿರಿ, ಇಂದಿನಿಂದ ನಾನು ಅಹ್ಮದಿಯಾಗಿರುವೆನು ಎಂದು ಹೇಳಿದರು.

ಈಜಿಪ್ಟಿನ ಮಹ್‌ಮೂದ್ ಗರೀಬ್ ಸಾಹಿಬ್ ಹೇಳುತ್ತಾರೆ: ನಾನು ನನ್ನ ಒಂಬತ್ತನೆ ವರ್ಷ ಪ್ರಾಯದಲ್ಲಿ ಸ್ವಪ್ನದಲ್ಲಿ ಒಂದು ಗಂಭೀರ ಧ್ವನಿಯನ್ನು ಒಮ್ಮೆ ಆಲಿಸಿದ್ದೆ. ಆ ಧ್ವನಿ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಾ ಇತ್ತು. ನನಗೆ ಅದು ಅರ್ಥವಾಗುತ್ತಿರಲಿಲ್ಲ. ಆದರೆ ನಾನು ಅದನ್ನು ಆಲಿಸಿ ಭಯಭೀತನಾಗುತ್ತಿದ್ದೆ. 2010ರಲ್ಲಿ **ಎಂ.ಟಿ.ಎ. ಅಲ್‌ಅರಬಿಯಾ**ದ ಪರಿಚಯವಾಯಿತು. ಅದರಲ್ಲಿ ಶರೀಫ್ ಔದೆ ಸಾಹಿಬ್ ಮತ್ತು ಮೂಸಾ ಔದೆ ಸಾಹಿಬರ ಶಬ್ದಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಲ್ಲೇಖಗಳನ್ನು ಆಲಿಸಿದಾಗ ಕೂಡಲೆ ನನಗೆ ಮನವರಿಕೆ ಆಯಿತು ನನ್ನ ಒಂಬತ್ತನೆ ವರ್ಷ ಪ್ರಾಯದಲ್ಲಿ ನಾನು ಆಲಿಸಿದ ಶಬ್ದಗಳು ಇದೇ ಆಗಿವೆ ಎಂದು. ಅನಂತರ ನಾನು ಹೆಚ್ಚು ಆಸಕ್ತಿಯಿಂದ ಎಂ.ಟಿ.ಎ. ನೋಡಲು ತೊಡಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನುಡಿಗಳು ಮತ್ತು ಅವರ ಖಸೀದಗಳು ನನ್ನ ಹೃದಯದಲ್ಲಿ ಗಾಢವಾದ ಪ್ರಭಾವ ಬೀರಿದುವು. ನಾನು ನನ್ನ ಮನಸ್ಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಾರವಿಂದವನ್ನು ಕಲ್ಪಿಸುತ್ತಿದ್ದಾಗಲೆಲ್ಲಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರ ನನ್ನ ಮುಂದೆ ಬರುತ್ತಿತ್ತು. ಒಂದು ದಿನ ನಾನು ಎಂ.ಟಿ.ಎ. ನೋಡುತ್ತಿದ್ದೆ. ಅದರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರ ಸಹ ಕಾಣಿಸುತ್ತಿತ್ತು. ನಾನು ಚಿತ್ರವನ್ನು ಸಂಬೋಧಿಸಿ ಹೇಳಿದೆ: ನಾನು ಅಲ್ಲಾಹನಾಣೆ ಹಾಕಿ ಹೇಳುತ್ತೇನೆ ನೀವೇ ನನಗೆ ತಿಳಿಸಿರಿ. ನೀವು ನಿಮ್ಮ ವಾದದಲ್ಲಿ ಸತ್ಯವಂತರಾಗಿರುವಿರೋ ಅಥವಾ ಅಲ್ಲವೋ? ಅನಂತರ ನಾನು ಅಲ್ಲಿಂದ ನನ್ನ ಕೆಲಸಕ್ಕೆ ಹೋದೆ. ನಾನು ಸಾಯಂಕಾಲ ಮರಳಿ ಬಂದಾಗ ಕೂಡಲೆ ನಾನು ಟಿ.ವಿ. ನೋಡಲು ತೊಡಗಿದೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಕೆಳಗಿನ ಉದ್ಧರಣಿಯನ್ನು ಓದಲಾಗುತ್ತಿತ್ತು. **ಯಾ ಖೌಮಿ ಇನ್ನೀ ಮಿನಲ್ಲಾಹಿ, ಇನ್ನೀಮಿನಲ್ಲಾಹಿ, ಇನ್ನೀ ಮಿನಲ್ಲಾಹಿ, ವ ಅಶ್‌ಹಿದು ರಬ್ಬೀ ಇನ್ನೀಮಿನಲ್ಲಾಹಿ.** (ಓ ನನ್ನ ಸಮುದಾಯವೇ, ನಾನು ನಿಶ್ಚಯವಾಗಿಯೂ ಅಲ್ಲಾಹನ ಕಡೆಯಿಂದ ಆಗಮಿಸಿದವನಾಗಿದ್ದೇನೆ. ನಾನು ನಿಶ್ಚಯವಾಗಿಯೂ ಅಲ್ಲಾಹನ ಕಡೆಯಿಂದ ಆಗಮಿಸಿರುವವನಾಗಿದ್ದೇನೆ. ನಾನು ನಿಶ್ಚಯವಾಗಿಯೂ ಅಲ್ಲಾಹನ ಕಡೆಯಿಂದ ಆಗಮಿಸಿದವನಾಗಿದ್ದೇನೆ. ನಾನು ನನ್ನ ಪ್ರಭುವಾದ ಅಲ್ಲಾಹನನ್ನು ಸಾಕ್ಷಿಯಾಗಿ ಮಾಡಿ ಹೇಳುತ್ತೇನೆ, ನಾನು ನಿಶ್ಚಯವಾಗಿಯೂ ಅಲ್ಲಾಹನ ಕಡೆಯಿಂದ ಆಗಮಿಸಿದವನಾಗಿದ್ದೇನೆ.) ನಾನು ಈ ಮಾತುಗಳನ್ನು ಆಲಿಸಿದ ಕೂಡಲೆ ಮೊಣಕಾಲೂರಿ ಬಿದ್ದುಬಿಟ್ಟೆನು. ನಾನು ದಿಢೀರನೆ ಟಿ.ವಿ.ಯಲ್ಲಿ ಕಾಣಿಸುವ ಹುಝೂರ್ ಅಲೈಹಿಸ್ಸಲಾಮರ ಚಿತ್ರವನ್ನು ಚುಂಬಿಸಿ ಅಲೈಕಸ್ಸಲಾಮ್, ಅಲೈಕಸ್ಸಲಾಮ್ ಎಂದು ಹೇಳಲು ತೊಡಗಿದೆ. ಒಂದು ಕ್ಷಣದಲ್ಲಿ ಅಹ್ಮದಿಯ್ಯತ್ ನನ್ನದೆಲ್ಲವೂ ಆಯಿತು. ನಾನು ಬೈಅತ್ ಮಾಡಿದೆ.

ಜೋರ್ಡನ್ ದೇಶದ ಜಮೀಲ್ ಝುರಾನ್ ಸಾಹಿಬ್ ಹೇಳುತ್ತಾರೆ: ಒಂದು ರಾತ್ರಿ ನಾನು ಸ್ವಪ್ನದಲ್ಲಿ ಕಂಡೆನು. ನಾನು ಒಂದು ನೇರವಾದ ಮಾರ್ಗದಲ್ಲಿ ಏಕಾಂಗಿಯಾಗಿ ನಿಂತಿದ್ದೇನೆ. ಅಲ್ಲಿಗೆ ಒಂದು ಹೊಸ ಮೋಡಲಿನ ಮರ್ಸಿಡಸ್ ಕಾರು ಬಂತು. ಅದರೊಳಗೆ ಡ್ರೈವರ್‌ಗೆ ಸಮೀಪದ ಸೀಟಿನಲ್ಲಿ ಒಬ್ಬರು ಕುಳಿತಿದ್ದಾರೆ. ಅವರು ನನ್ನೊಂದಿಗೆ ಕಾರನ್ನು ಚಲಾಯಿಸಲು ಆಜ್ಞಾಪಿಸಿದರು. ನಾನು ಡ್ರೈವರ್ ಸೀಟಿನಲ್ಲಿ ಕುಳಿತೆನು. ಆಗ ನನ್ನ ಹೃದಯದಲ್ಲಿ ಭಾವನೆ ಉಂಟಾಯಿತು ನಾನು ಹಝ್ರತ್ ಇಮಾಮ್ ಮಹ್‌ದಿ ಅಲೈಹಿಸ್ಸಲಾಮರ ಜೊತೆಗೆ ಕುಳಿತಿದ್ದೇನೆ ಎಂದು. ನನಗೆ ಸ್ವಲ್ಪ ಹೆದರಿಕೆ ಸಹ ಉಂಟಾಗಲು ತೊಡಗಿತು. ಕಾರು ಮುಂದೆ ಚಲಿಸಿದಾಗ ಕಪ್ಪು ಮುಖವನ್ನು ಹೊಂದಿದ ಅನೇಕರು ಕಾಣಿಸಿದರು. ಅವರೆಲ್ಲರೂ ಮಾರ್ಗದ ಎರಡು ಬದಿಗಳಲ್ಲಿಯೂ ಸಾಲಾಗಿ ನಿಂತಿದ್ದರು. ಅವರ ಕೈಯ್ಯಲ್ಲಿ ಸಾಮಾನ್ಯ ಆಯುಧ ಸಹ ಇತ್ತು. ಅವರು ನಮ್ಮ ಕಾರಿನ ಕಡೆಗೆ ಗುಂಡು ಹೊಡೆದರು. ಆದರೆ ನಮಗೆ ಅವು ತಾಗಲಿಲ್ಲ. ನಾವು ಸುರಕ್ಷಿತವಾಗಿ ನಮ್ಮ ಉದ್ದೇಶಿತ ಸ್ಥಳವನ್ನು ತಲಪಿದೆವು. ಸ್ವಪ್ನದಲ್ಲಿಯೇ ನಾನು ಕಾರನ್ನು ನಿಲ್ಲಿಸಿದಾಗ ಹಝ್ರತ್ ಇಮಾಮ್ ಮಹ್‌ದೀ ಅಲೈಹಿಸ್ಸಲಾಮ್ ನನ್ನೊಂದಿಗೆ ಹೇಳಿದರು, ಕೆಳಗಿಳಿದು ಕಾರಿನ ಡಿಕ್ಕಿ ತೆರೆ. ನಾನು ಕೆಳಗೆ ಇಳಿದು ಕಾರಿನ ಡಿಕ್ಕಿ ತೆರೆದಾಗ ಅದರೊಳಗೆ ಮರದ ಸುಂದರವಾದ ಒಂದು ಪೆಟ್ಟಿಗೆ ಇತ್ತು. ಆ ಪೆಟ್ಟಿಗೆಯೊಳಗೆ ಐದು ವರ್ಷ ಪ್ರಾಯದ ಬಹಳ ಸುಂದರವಾದ ಮಗು ನನ್ನನ್ನು ನೋಡಲು ತೊಡಗಿತು. ನನಗೆ ಎಚ್ಚರವಾದಾಗ ಆ ಸ್ವಪ್ನ ಕಂಡ ಬಗ್ಗೆ ನನಗೆ ಬಹಳ ಸಂತೋಷವಿತ್ತು. ಇದು ಅಲ್ಲಾಹನ ಕಡೆಯಿಂದ ಒಂದು ಸಂದೇಶವೆಂದು ನಾನು ಭಾವಿಸಿದೆ. ನಾನು ನನ್ನ ಸ್ವಪ್ನವನ್ನು ಹೀಗೆ ವ್ಯಾಖ್ಯಾನಿಸಿದೆ. ಹೊಸ ಕಾರು ಎಂದರೆ ಜೀವಿತದ ಹೊಸ ಪ್ರಯಾಣ ಎಂದು. ಕಪ್ಪು ಮುಖವನ್ನು ಹೊಂದಿದವರು ನಮ್ಮ ಮೇಲೆ ಗುಂಡು ಹಾರಿಸಿದುದರ ಉದ್ದೇಶ ಆ ಪ್ರಯಾಣವನ್ನು ವಿರೋಧಿಸುವವರಾಗಿದ್ದಾರೆ. ಆದರೆ ಅವರು ಯಾವ ಪ್ರಭಾವವನ್ನೂ ಬೀರಲಾರರು. ಸುಂದರ ಪೆಟ್ಟಿಗೆಯಲ್ಲಿ ರಹಸ್ಯ ವಸ್ತುಗಳು ಸುರಕ್ಷಿತವಾಗಿರಿಸಲ್ಪಡುತ್ತವೆ. ಐದು ವರ್ಷದ ಮಗು ಎಂದರೆ ಶುಭವಾರ್ತೆಗಳಾಗಿವೆ. ಅವು ಐದು ವರ್ಷಗಳಲ್ಲಿ ಈಡೇರುವುವು. ವಿಚಿತ್ರವೇನೆಂದರೆ ಅಹ್ಮದಿಯಾ ಜಮಾಅತ್ ಬಗ್ಗೆ ತಿಳಿದ ನಂತರ ನನ್ನ ಜೀವಿತದ ನವ ಪ್ರಯಾಣ ಆರಂಭವಾಯಿತು. ಐದನೆ ಖಿಲಾಫತ್ ಕಾಲದಲ್ಲಿ ನನಗೆ ಜಮಾಅತ್‌ಗೆ ಸೇರಲು ಭಾಗ್ಯ ಲಭಿಸಿತು. ನಾನು ನನ್ನ

ಗ್ರಾಮದಲ್ಲಿ ಒಂಟಿ ಅಹ್ಮದಿಯಾಗಿದ್ದೆ. ಇಮಾಮ್ ಮಹ್‌ದಿ ಆಗಮಿಸಿದ ಬಗ್ಗೆ ನಾನು ಪ್ರಕಟಿಸಿದಾಗ ನೆರೆಹೊರೆಯವರು ನನ್ನ ವಿರೋಧಿಗಳಾದರು. ಮಸ್‌ಜಿದ್‌ಗಳಿಂದ ನನ್ನ ವಿರುದ್ಧ ಕುಫ್ರ್ ಫತ್ವ ಜಾರಿಗೊಂಡವು. ನಾನು ಅಲ್ಲಾಹನೊಂದಿಗೆ ಪ್ರಾರ್ಥಿಸಿದೆ, ನನ್ನ ಪ್ರಯಾಣದಲ್ಲಿ ನನಗೆ ಸಂಗಡಿಗರನ್ನು ದಯಪಾಲಿಸಬೇಕೆಂದು. ಅಲ್ಲಾಹನು ನನಗೆ ಒಳ್ಳೆಯವರಾದ ಸಾತ್ವಿಕರಾದ ಎಂತಹ ಸಂಗಡಿಗರನ್ನು ನೀಡಿದನೆಂದರೆ ನನಗೆ ಅವರ ಪರಿಚಯವೇ ಇರಲಿಲ್ಲ. ಅವರೇ ನನ್ನ ನೈಜ ಸಂಬಂಧಿಕರೂ ಪ್ರಿಯ ಜನರೂ ಆದರು.

ಮತ್ತೋರ್ವ ಸ್ನೇಹಿತ ಸಿರಿಯಾದ ಮುಹಮ್ಮದ್ ಅಬ್ದುಲ್ಲಾ, ಅವರು ಈಗ ಕೆನಡದಲ್ಲಿದ್ದಾರೆ. ಅವರು ಹೇಳುತ್ತಾರೆ: ನಾನು ಸೇಲ್ಸ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೆ. ನನ್ನ ಗ್ರಾಹಕರಲ್ಲಿ ಒಬ್ಬರ ಪುತ್ರನೊಂದಿಗೆ ನನಗೆ ಪರಿಚಯವಾಯಿತು. ಆ ಯುವಕ ಅಹ್ಮದಿಯಾಗಿದ್ದ. ಅವನೊಂದಿಗೆ ಸ್ನೇಹ ವರ್ಧಿಸಿದಾಗ ಅವನು ನನಗೆ ಅಹ್ಮದಿಯಾ ಜಮಾಅತ್ ಬಗ್ಗೆ ತಿಳಿಸಿದನು. ಅವನು ನನಗೆ **ಇಸ್ಲಾಮೀ ಉಸೂಲ್‌ಕಿ ಫಿಲಾಸಫಿ** (ಇಸ್ಲಾಮ್ ಧರ್ಮ ತತ್ವಜ್ಞಾನ) ಇದರ ಅರಬಿ ಭಾಷಾಂತರವನ್ನು ಕೊಟ್ಟನು. ಆ ಪುಸ್ತಕ ನನ್ನ ಮೇಲೆ ಬಹಳ ಪ್ರಭಾವ ಬೀರಿತು. ಅದರಲ್ಲಿರುವ ಜ್ಞಾನ ನನಗೆ ಇಷ್ಟಕರವಾಯಿತು. ಅನಂತರ ಒಂದು ವರ್ಷಕಾಲ ನಾನು ಜಮಾಅತಿನ ವಿವಿಧ ಪುಸ್ತಕಗಳನ್ನು ಓದಿದೆ ಮತ್ತು ಎಂ.ಟಿ.ಎ. ಅಲ್‌ಅರಬಿಯಾ ಸಹ ನೋಡುತ್ತಾ ಇದ್ದೆ. ಒಂದು ವರ್ಷದ ಅಧ್ಯಯನ ಮತ್ತು ಎಂ.ಟಿ.ಎ. ವೀಕ್ಷಣೆ ಮತ್ತು ಜಮಾಅತಿನ ವಿಶ್ವಾಸಗಳ ಬಗ್ಗೆ ತುಲನಾತ್ಮಕ ಪರಿಶೀಲನೆ ನಡೆಸಿದ ನಂತರ ನನಗೆ ಅಹ್ಮದಿಯಾ ಜಮಾಅತಿಗೆ ಸೇರುವ ಇಚ್ಛೆ ಉಂಟಾಯಿತು. ನಾನು ಇಸ್ತಿಖಾರ ಪ್ರಾರ್ಥನೆ ಮಾಡಲು ತೊಡಗಿದೆ. ಕೆಲವು ದಿನಗಳ ನಂತರ ಒಂದು ರಾತ್ರಿ, ಅದು ನನಗೆ **ಲೈಲತುಲ್ ಖದ್ರ್** ರಾತ್ರಿಯಾಯಿತು. ಆ ರಾತ್ರಿ ನಾನು ಒಂದು ಅತ್ಯಂತ ವೈಭವಶಾಲಿ ಸ್ವಪ್ನವನ್ನು ಕಂಡೆನು. ನಾನು ನನ್ನೊಬ್ಬ ಸಾತ್ವಿಕ ಸಂಬಂಧಿಕರನ್ನು ಸ್ವಪ್ನದಲ್ಲಿ ಕಂಡೆನು. ಅವರು ನನಗೊಂದು ಕಾಗದದ ಹಾಳೆ ನೀಡುತ್ತಾ ಇದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಎಂದು ಹೇಳಿದರು. ನಾನು ಬಹಳ ಉತ್ಸಾಹದಿಂದ ಅದರಲ್ಲಿ ಬರೆದಿರುವುದನ್ನು ಓದಿದೆ. ಅದರಲ್ಲಿ ಬರೆದಿತ್ತು, **ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ.** ನನಗೆ ಎಚ್ಚರವಾದಾಗ ನಾನು ಬಹಳ ಸಂತೋಷದಿಂದಿದ್ದೆ. ಆಗ ನನ್ನ ನಾಲಗೆಯಲ್ಲಿ **ಉದ್‌ಖುಲೂಹಾಬಿಸಲಾಮಿನ್ ಆಮಿನೀನ್** (ಅದರೊಳಗೆ ಸಮಾಧಾನ ಭರಿತರಾಗಿ ನಿರ್ಭಯರಾಗಿ ಪ್ರವೇಶಿಸಿರಿ) ಎಂಬ ಪವಿತ್ರ ಖುರ್‌ಆನ್ ವಚನ ಜಾರಿಗೊಂಡಿತ್ತು. ಇದು ಜಮಾಅತ್‌ನಲ್ಲಿ ಪ್ರವೇಶಿಸಬೇಕೆಂಬ ಬಗ್ಗೆ ಸ್ಪಷ್ಟ ಸಂದೇಶವಾಗಿತ್ತು. ಇದು ನನ್ನ ಇಸ್ತಿಖಾರ ಪ್ರಾರ್ಥನೆಗೆ ಉತ್ತರವೆಂದು ನನಗೆ ದೃಢವಾಯಿತು. ಈ ಕಾರಣದಿಂದ ನಾನು ಬೈಅತ್ ಮಾಡಿದೆ.

ಸಿರಿಯಾದ ಒಬ್ಬ ಮಹಿಳೆ ಹೇಳುತ್ತಾರೆ: ಅಹ್ಮದಿಯಾ ಜಮಾಅತ್‌ಗೆ ಪ್ರವೇಶಿಸುವ ಮೊದಲು ನಾನು ಮತ್ತು ನನ್ನ ಸಹೋದರಿ ಬೇರೆ ಒಂದು ಜಮಾಅತ್ ಸತ್ಯವೆಂದು ಭಾವಿಸಿ ಅದರಲ್ಲಿ ಸೇರಿದ್ದೆವು. ಆದರೆ ಅನಂತರ ತಿಳಿಯಿತು ಆ ಜಮಾಅತ್ ಶರೀಅತ್ ಹೆಸರಿನಲ್ಲಿ ತನ್ನದೇ ಆದ ಬೇರೆ ಶರೀಅತ್ ರಚಿಸಿದೆ ಎಂದು. ಅನಂತರ ನಾನು ಅಲ್ಲಾಹನೊಂದಿಗೆ ಅಳುತ್ತಾ ಪ್ರಾರ್ಥಿಸುತ್ತಾ ಇದ್ದೆ. ಓ ನನ್ನ ದೇವಾ, ನಿನ್ನ ಸರಿಯಾದ ಧರ್ಮ ಎಲ್ಲಿದೆ ಎಂದು ನನಗೆ ತಿಳಿಸಿಕೊಡು. ಯಾವ ಜಮಾಅತ್‌ಗೆ ನಿನ್ನ ಸಹಾಯ ದೊರಕುತ್ತಿದೆ ಎಂದು ತಿಳಿಸು. ಇಂತಹ ಸ್ಥಿತಿಯಲ್ಲಿ ನಾನು ಕಶ್ಫ್‌ನಲ್ಲಿ ಕಂಡೆನು, ಒಬ್ಬ ವ್ಯಕ್ತಿ ನನ್ನ ಬಳಿಗೆ ಬಂದು ನಿಂತರು. ಆ ವ್ಯಕ್ತಿ ನನ್ನೊಂದಿಗೆ ಸಹಾನುಭೂತಿಯಿಂದ ವರ್ತಿಸಲು ಆಗಮಿಸಿದ್ದಾನೆಂದು ನನಗೆ ಭಾಸವಾಯಿತು. ನಾನು ಮನಸ್ಸಿನಲ್ಲಿ ವಿಚಾರಿಸಿದೆ ಈ ವ್ಯಕ್ತಿ ಯಾರೆಂದು. ಆದರೆ ನನಗೆ ಉತ್ತರ ಲಭಿಸಲಿಲ್ಲ. ಮುಂದಿನ ದಿನ ಸಹ ನಾನು ಬಹಳ ಅತ್ತು ಪ್ರಾರ್ಥಿಸಿದೆನು. ನಾನು ಅಳು ನಿಲ್ಲಿಸಿದಾಗ ಪುನಃ ಆ ವ್ಯಕ್ತಿಯನ್ನು ಕಂಡೆನು. ಅನಂತರ ಮೂರನೆಯ ಸಾರಿ ಸಹ ಹೀಗೆಯೇ ಆಯಿತು. ಆಗ ನಾನು ಉಚ್ಚಸ್ವರದಿಂದ ಅಲ್ಲಾಹನನ್ನು ಬೇಡಿಕೊಂಡೆ ನನಗೆ ಕಾಣಿಸಿಕೊಳ್ಳುವ ಈ ಸಹಾನುಭೂತಿ ತೋರಿಸುವ ವ್ಯಕ್ತಿ ಯಾರು ಮತ್ತು ನನಗೆ ಪದೇ ಪದೇ ಅವರು ಏಕೆ ಕಾಣಿಸಿಕೊಳ್ಳುತ್ತಾರೆ ಎಂದು. ಇದಕ್ಕೆ ಉತ್ತರ ನನಗೆ ಸ್ವಲ್ಪ ಸಮಯದ ನಂತರ ದೊರಕಿತು. ನಾನೊಂದು ವಿಚಿತ್ರ ಸ್ವಪ್ನ ಕಂಡೆನು. ಅದು ನನ್ನನ್ನು ಬದಲಾಯಿಸಿತು. ನಾನೊಂದು ಮೈದಾನದಲ್ಲಿದ್ದೇನೆ. ಆಗ ಕೆಲವು ಜನರು ಒಂದು ಕಾರಿನಲ್ಲಿ ಬರುತ್ತಿರುವುದಾಗಿ ಕಂಡೆನು. ಕಾರಿನ ಮೇಲ್ಭಾಗದಲ್ಲಿ ಸ್ಯಾಟಲೈಟ್ ಡಿಶ್ ಇತ್ತು. ಆ ಕಾರು ಮೈದಾನದ ಮಧ್ಯಕ್ಕೆ ಬಂದು ನಿಂತಿತು. ಅದರೊಳಗಿಂದ ಕೆಲವು ಜನರು ಇಳಿದು ಸಾಮಗ್ರಿಗಳನ್ನು ಇಳಿಸಿದರು. ಅವರಲ್ಲೊಬ್ಬರು ಅರಬಿ ಪೋಷಾಕು ಧರಿಸಿದ್ದರು. ಅವರ ಮುಖ ಪ್ರಕಾಶಭರಿತವಾಗಿತ್ತು. ಆ ವ್ಯಕ್ತಿ ಮೈದಾನದ ಮಧ್ಯದಿಂದ ಬಂದು ನನ್ನೆದುರಿಗೆ ನಿಂತರು ಮತ್ತು ಕೇಳಿದರು: 'ಸಹೋದರಿ, ನೀವು ಇಲ್ಲಿ ಏನು ಮಾಡುತ್ತಿದ್ದಿರಿ? ನಾನು ಉತ್ತರ ನೀಡದೆ ಅವರೊಡನೆ ಕೇಳಿದೆ: ನೀವೆಲ್ಲರೂ ಇಲ್ಲಿ ಏನು ಮಾಡುತ್ತಿರುವಿರಿ ಎಂದು. ಆ ವ್ಯಕ್ತಿ ಹೇಳಿದರು, ನಾವು ಹೊಸ ಟಿ.ವಿ. ಚ್ಯಾನಲ್ ಪ್ರಾರಂಭಿಸುತ್ತಿದ್ದೇವೆ. ನೀವು ಅದನ್ನು ನೋಡುವಿರೇನು? ನಾನು ಹೇಳಿದೆ: ನಾನು ಖಂಡಿತವಾಗಿಯೂ ನೋಡುವೆನು ಎಂದು. ಈ ಸಂಭಾಷಣೆಯ ನಂತರ ನನಗೆ ಎಚ್ಚರವಾಯಿತು.

ಮುಂದಿನ ದಿನ ನಾನು ಟಿ.ವಿ. ತಂದೆನು. ಸ್ವಲ್ಪ ಸಮಯದೊಳಗೆ ಎಲ್ಲವನ್ನೂ ಸೆಟ್ ಮಾಡಿದೆ. ನಾನು ವಿವಿಧ ಚ್ಯಾನಲ್‌ಗಳನ್ನು ನೋಡುತ್ತಾ ಇದ್ದಾಗ ಒಂದು ಚ್ಯಾನಲ್ ಮಾತ್ರ ಎಲ್ಲವುಗಳಿಗಿಂತ ವಿಭಿನ್ನವಾಗಿ ಕಾಣಿಸಿತು. ನಾನು ಬೇರೆ ಚ್ಯಾನಲ್‌ಗಳನ್ನು ಬಿಟ್ಟು ಈ ಚ್ಯಾನಲನ್ನು ಸ್ವಲ್ಪ ಸಮಯ

ನೋಡಲು ತೊಡಗಿದೆ. ಅದು ಎಂ.ಟಿ.ಎ. ಚ್ಯಾನಲ್ ಆಗಿತ್ತು. ಆಗ ಅದರಲ್ಲಿ ಅಲ್‌ಹವಾರ್ ಕಾರ್ಯಕ್ರಮ ಜಾರಿಯಲ್ಲಿತ್ತು. ಆ ಕಾರ್ಯಕ್ರಮ ನೋಡುತ್ತಾ ಇದ್ದಾಗ ಆ ಕಾರ್ಯಕ್ರಮದ ನಿರ್ವಾಹಕರ ಕಡೆಗೆ ನನ್ನ ದೃಷ್ಟಿ ಹರಿಯುತ್ತಾ ಇತ್ತು. ನಾನು ಆಗ ಯೋಚಿಸುತ್ತಾ ಇದ್ದೆ ಅವರನ್ನು ನಾನು ಎಲ್ಲಿಯೋ ನೋಡಿದ್ದೇನೆ ಎಂದು. ಅಚಾನಕವಾಗಿ ನನಗೆ ನೆನಪಿಗೆ ಬಂತು ನಾನು ಸ್ವಪ್ನದಲ್ಲಿ ಕಂಡ ಮೈದಾನದಲ್ಲಿ ಸ್ಯಾಟಲೈಟ್ ಚ್ಯಾನಲ್ ಪ್ರಾರಂಭಿಸಿದ ವ್ಯಕ್ತಿ ಅವರೇ ಎಂದು. ಒಂದು ದಿನ ನಾನು ಕಾರ್ಯಕ್ರಮ ನೋಡುತ್ತಾ ಇದ್ದಾಗ ಇಮಾಮ್ ಮಹ್‌ದಿ ಮತ್ತು ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳನ್ನು ಆಲಿಸಿದಾಗ ಅದರ ಕಡೆಗೆ ಶ್ರದ್ಧೆ ನೀಡಿದೆ. ಆಗ ಒಂದು ಚಿತ್ರ ಪ್ರದರ್ಶಿಸಿ ಅದರ ಕೆಳಗೆ ಇಮಾಮ್ ಮಹ್‌ದಿ ಮತ್ತು ಮಸೀಹ್ ಮೌಊದ್ ಎಂದು ಬರೆಯಲಾಗಿತ್ತು. ನಾನು ನೋಡುತ್ತಾ ಇದ್ದಾಗ ಇಮಾಮ್ ಮಹ್‌ದಿಯವರ ಉಲ್ಲೇಖಗಳು ಕಾಣಿಸಿದುವು. ಪ್ರಥಮ ಉಲ್ಲೇಖದ ಪ್ರಥಮ ವಾಕ್ಯದಿಂದಲೇ ನನ್ನಲ್ಲಿ ಸಂಪೂರ್ಣ ಬದಲಾವಣೆ ಉಂಟಾಯಿತು. **ವ ವಲ್ಲಾಹಿ ಇನ್ನೀ ಮಿನಲ್ಲಾಹಿ ಅತೈತು, ವಮಫ್ತರೈತು ವಖದ್ ಖಾಬ ಮನಿಫ್ತರಾ.** (ಅಲ್ಲಾಹನಾಣೆ ನಾನು ಅಲ್ಲಾಹನ ಕಡೆಯಿಂದ ಆಗಮಿಸಿದವನಾಗಿದ್ದೇನೆ; ನಾನು ಯಾವುದೇ ಸುಳ್ಳನ್ನು ಸೃಷ್ಟಿಸಿಲ್ಲ. ನಿಶ್ಚಯವಾಗಿಯೂ ಸುಳ್ಳು ಸೃಷ್ಟಿಸುವವನು ಪರಾಜಿತನಾಗುತ್ತಾನೆ.) ಈ ಶಬ್ದಗಳನ್ನು ಆಲಿಸಿದ ಕೂಡಲೆ ನಾನು ತಾನಾಗಿ ಹೇಳಿದೆ: ಇದು ಒಬ್ಬ ಸತ್ಯವಾದಿಯ ನುಡಿಗಳಾಗಿವೆ. ಈ ವ್ಯಕ್ತಿ ನಿಶ್ಚಯವಾಗಿಯೂ ತನ್ನ ವಾದದಲ್ಲಿ ಸತ್ಯವಂತರಾಗಿದ್ದಾರೆ. ಅವರೇ ಇಮಾಮ್ ಮಹ್‌ದಿ ಮತ್ತು ಮಸೀಹ್ ಮೌಊದ್ ಆಗಿದ್ದಾರೆ. ಉಲ್ಲೇಖಗಳನ್ನು ಓದುತ್ತಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರ ಪುನಃ ಪ್ರದರ್ಶಿತವಾದಾಗ ನಾನು ಆ ಚಿತ್ರವನ್ನು ನೋಡಿ ಆಶ್ಚರ್ಯ ಚಕಿತಳಾದೆ. ನಾನು ಕಶ್‌ಫ್ ಸ್ಥಿತಿಯಲ್ಲಿ ಕಂಡ ಮಹಾನುಭಾವರು ಅವರೇ ಆಗಿದ್ದರು. ನಾನು ಅಲ್ಲಾಹನೊಂದಿಗೆ ಅಳುತ್ತಾ ಓ ನನ್ನ ದೇವಾ, ನಿನ್ನ ಸರಿಯಾದ ಧರ್ಮ ಎಲ್ಲಿದೆ, ಈಗ ಯಾವ ಜಮಾಅತಿಗೆ ನಿನ್ನ ಸಹಾಯ ಲಭಿಸುತ್ತಿದೆ ಎಂದು ಪ್ರಾರ್ಥಿಸುತ್ತಿದ್ದಾಗ ಇದೇ ಮಹಾನುಭಾವರು ನನ್ನೊಂದಿಗೆ ಸಹಾನುಭೂತಿ ಪ್ರಕಟಿಸಲು ಆಗಮಿಸಿದ್ದರು. ಇವರು ಯಾರೆಂದು ಆಗ ನಾನು ಮನಸ್ಸಿನಲ್ಲಿಯೇ ಪ್ರಶ್ನಿಸಿದ್ದೆ. ಈಗ ಟಿ.ವಿ.ಯಲ್ಲಿ ಅವರ ಚಿತ್ರ ನೋಡಿ ನನ್ನ ಕಶ್‌ಫ್ ಮತ್ತು ಅದರ ವ್ಯಾಖ್ಯಾನ ತಿಳಿಯಿತು. ಅಲ್ಲಾಹನು ನನಗೆ ಆ ಮೂಲಕ ತಿಳಿಸಿದನು– ಈ ಮಹಾನುಭಾವರ ಜಮಾಅತಿಗೆ ಅಲ್ಲಾಹನ ಸಹಾಯ ಲಭಿಸುತ್ತಾ ಇದೆ ಎಂದು. ಈ ಜಮಾಅತ್ ಅಲ್ಲಾಹನ ನೈಜ ಧರ್ಮವನ್ನು ಪ್ರತಿನಿಧೀಕರಿಸುವ ಜಮಾಅತ್ ಆಗಿದೆ ಎಂದು. ನಾನು ಟಿ.ವಿ.ಯಲ್ಲಿ ಚಿತ್ರವನ್ನು ನೋಡುತ್ತಾ ಹೇಳಿದೆ: ನೀವೇ ಈಗ ಇಸ್ಲಾಮ್ ಪರವಾಗಿ ವಿರೋಧಿಗಳನ್ನು ಪ್ರತಿರೋಧಿಸುತ್ತಿರುವಿರಿ. ನೀವೇ ಕ್ರೈಸ್ತರ ಕುತಂತ್ರಗಳನ್ನು ಎದುರಿಸುತ್ತಿರುವಿರಿ. ನೀವೇ ಸತ್ಯವಾದ ಮಹ್‌ದೀ ಮಸೀಹ್ ಆಗಿರುವಿರಿ. ನಾನು ನಿಮ್ಮನ್ನು ಸತ್ಯವಂತರೆಂದು ಅಂಗೀಕರಿಸುತ್ತೇನೆ ಮತ್ತು ನಿಮ್ಮನ್ನು ಬೈಅತ್ ಮಾಡುತ್ತೇನೆ. ವಾಸ್ತವಿಕವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಬೇಕೆಂಬ ಬಗ್ಗೆ ನನಗೆ ಆಗ ತಿಳಿದಿರಲಿಲ್ಲ. ನಾನು ನನ್ನ ಸಂಬಂಧಿಕರಿಗೆ ಈ ಚ್ಯಾನಲ್ ಬಗ್ಗೆ ಮತ್ತು ಜಮಾಅತ್ ಬಗ್ಗೆ ತಿಳಿಸಿದಾಗ ಅವರು ಅದರ ಬಗ್ಗೆ ಹೆಚ್ಚು ಗಮನ ಹರಿಸಲಿಲ್ಲ. ಆದರೆ ನನ್ನ ಸಹೋದರಿ ಮತ್ತು ಚಿಕ್ಕಮ್ಮ ಅನೇಕ ಸಾರಿ ಎಂ.ಟಿ.ಎ. ನೋಡಿದ ನಂತರ ಬೈಅತ್ ಮಾಡಲು ನಿರ್ಧರಿಸಿದರು. ಅನಂತರ ನನ್ನ ತಾಯಿ, ಬೇರೆ ಇಬ್ಬರು ಸಹೋದರಿಯರು, ಮತ್ತು ಸಹೋದರ ಬೈಅತ್ ಮಾಡಿದರು.

(ಹುಝೂರ್ ಅನಂತರ ಇನ್ನೂ ಕೆಲವರು ಸ್ವಪ್ನ ಮತ್ತು ಕಶ್‌ಫ್ ಮುಖಾಂತರ ಅಹ್ಮದಿಯಾ ಜಮಾಅತಿಗೆ ಸೇರಿದ ಬಗ್ಗೆ ಕೆಲವು ಘಟನೆಗಳನ್ನು ವಿವರಿಸಿದರು. ಅನಂತರ ಹೀಗೆ ಹೇಳಿದರು:)

ನಾನು ಕೆಲವು ಘಟನೆಗಳನ್ನು ಮಾತ್ರ ವಿವರಿಸಿದ್ದೇನೆ. ಇಂತಹ ಅನೇಕ ಘಟನೆಗಳು ಸಂಭವಿಸಿವೆ. ಹೊಸದಾಗಿ ಜಮಾಅತಿಗೆ ಪ್ರವೇಶಿಸುವ ಈ ಜನರ ವಿಶ್ವಾಸವನ್ನು ಅಲ್ಲಾಹನು ದೃಢಪಡಿಸಿ ಅಭಿವೃದ್ಧಿ ನೀಡಲಿ. ಮೊದಲೇ ಅಹ್ಮದಿಯರಾಗಿರುವ ನಮಗೂ ಸಹ ನಿಷ್ಠೆ ಮತ್ತು ವಿಶ್ವಾಸದಲ್ಲಿ ಅಲ್ಲಾಹನು ಅಭಿವೃದ್ಧಿಯನ್ನು ದಯಪಾಲಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 24-11-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon